## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯಾಗಳ ಗೌರವಧನ ಹೆಚ್ಚಿಸುವ ಕುರಿತು..

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ಇಡಿ 136 ಪಿಬಿಎಸ್ 2012, ದಿನಾಂಕ:26.12.2013
2. ಸರ್ಕಾರದ ಆದೇಶ ಸಂಖ್ಯೆ:ಇಡಿ 100 ಪಿಬಿಎಸ್ 2016, ದಿನಾಂಕ:19.09.2016.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಡಿಎಂ.2(2)ಆ.ಮಾ:145:2006–07. ದಿನಾಂಕ:22.06.2017.

62 (2)

155396
4/12/18

*****

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ರಾಜ್ಯದ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗೌರವ ಧನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಆಯಾಗಳ ಗೌರವಧನವನ್ನು ರೂ.3,000/– ರಿಂದ ರೂ.5,000/– ಗಳಿಗೆ ಮಾಸಿಕ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಆನಂತರ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರದ ಆದೇಶದಲ್ಲಿ ಆಯಾಗಳ ಮಾಸಿಕ ಗೌರವಧನವನ್ನು ರೂ.5,000/–ಗಳಿಂದ ರೂ.6000/–ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

Adm 2

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:21.02.2017ರಂದು ನಡೆದ ಸಭೆಯಲ್ಲಿ ಆಯಾಗಳ ಗೌರವಧನವನ್ನು ಹೆಚ್ಚಿಸಲು ಮರುಪರಿಶೀಲಿಸುವಂತೆ ಸೂಚಿಸಲಾಗಿ ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ:(3)ರ ಪ್ರಸ್ತಾವನೆಯಲ್ಲಿ ಆಯಾಗಳ ಗೌರವಧನವನ್ನು ಹೆಚ್ಚಳದ ಸಂಬಂಧ ವಾರ್ಷಿಕವಾಗಿ ಉಂಟಾಗುವ ಆರ್ಥಿಕ ಹೊರೆ ಹಾಗೂ ಇತ್ಯಾದಿ ಅಂಕಿ ಅಂಶಗಳ ಮಾಹಿತಿಯನ್ನು ಒಳಗೊಂಡಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ:213/2013ರ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಯಾಗಳು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕನಿಷ್ಠ ಮೂಲ ವೇತನಕ್ಕೆ ಸಮಾನಾದ ಗೌರವ ಸಂಭಾವನೆ ಪಡೆಯಲು ಅರ್ಹರೇ ಎಂಬ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿ ಕಾನೂನು ಇಲಾಖೆಯು ಟಿಪ್ಪಣಿ ಸಂಖ್ಯೆ: ಲಾ/112/ಅಭಿಪ್ರಾಯ/12018. ದಿನಾಂಕ:28.02.2018ರಲ್ಲಿ "ವಿವಿಧ ಪ್ರಕಾರದ ತಾತ್ಕಾಲಿಕ, ಅರೆಕಾಲಿಕ, ಗುತ್ತಿಗೆ, ಪರಿಣಿತ, ಅರೆಪರಿಣಿತ, ಕೆಳಹಂತದ ನೌಕರರನ್ನು ಒಳಗೊಂಡ ಎಲ್ಲಾ ನೌಕರರು ಕನಿಷ್ಠ ಮೂಲ ವೇತನಕ್ಕೆ ಅರ್ಹರು" ಎಂಬ ಅಂಶವು ಆದೇಶದಲ್ಲಿ ಒಳಗೊಂಡಿದೆ. ಎಂಬುದಾಗಿ ಹಾಗೂ ಈ ತೀರ್ಪು ರಾಜ್ಯದ ಸರ್ಕಾರಿ ಕಿರಿಯ/ಹಿರಿಯ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯಾಗಳಿಗೂ ಸಹ ಅನ್ವಯವಾಗುತ್ತದೆ ಎಂಬ

ಕಾನೂನು ಇಲಾಖೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಇಡಿ 131 ಪಿಬಿಎಸ್ 2017**
**ಬೆಂಗಳೂರು, ದಿನಾಂಕ:20/11/2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 1913 ಆಯಾಗಳಿಗೆ ಪ್ರಸ್ತುತ ನೀಡುತ್ತಿರುವ ಗೌರವ ಸಂಭಾವನೆಯನ್ನು ರೂ.6000/-ಗಳಿಂದ 6ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿಯ ಗ್ರೂಪ್.ಡಿ ದರ್ಜೆಯ ನೌಕರರ ಕನಿಷ್ಠ ಮೂಲ ವೇತನವಾದ ರೂ.17,000/-ಗಳಿಗೆ ಪರಿಷ್ಕರಿಸಿ ನಿಗಧಿಪಡಿಸಿ ಆದೇಶಿಸಿದೆ. ಸದರಿ ಪರಿಷ್ಕರಣೆಯು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಈ ಹಿಂದೆ ಮಾಸಿಕ ಗೌರವ ಸಂಭಾವನೆಯನ್ನು ಯಾವ ಯಾವ ಲೆಕ್ಕಶೀರ್ಷಿಕೆಗಳಡಿ ಭರಿಸಲಾಗುತ್ತಿದೆಯೋ ಅದೇ ಲೆಕ್ಕಶೀರ್ಷಿಕೆಗಳಡಿಯಲ್ಲಿ ಪ್ರಸ್ತುತ ಹೆಚ್ಚಳದ ಮೊತ್ತವನ್ನು ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 866 ವೆಚ್ಚ-8/2018. ದಿನಾಂಕ :27.10.2018ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಎಂ ರಾಘವೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಪ್ರಾಥಮಿಕ ಶಿಕ್ಷಣ)ಶಿಕ್ಷಣ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ-5398, ಕರ್ನಾಟಕ, ಬೆಂಗಳೂರು-560001
2. ಪ್ರಧಾನ ಮಹಾಲೇಖಪಾಲರು (ಇ & ಆರ್.ಎಸ್.ಎ), ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ-5398, ಕರ್ನಾಟಕ, ಬೆಂಗಳೂರು-560001
3. ಮಹಾಲೇಖಪಾಲರು (ಎ & ಇ), ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು-560001
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಖೆ, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
7. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್,
8. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ,
9. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,

(7–9: **ಸಂಬಂಧಿಸಿದ ಎಲ್ಲಾ ಆಯುಕ್ತಾಲಯಗಳ ಮೂಲಕ**)

10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-8)/ ಯೋಜನಾ ಇಲಾಖೆ/ (ಪಿಪಿ-1), ವಿಧಾನಸೌಧ, ಬೆಂಗಳೂರು

11. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಮಹಿಳಾ ಆಯಾಗಳ ಸಂಘ,19/1, ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಸಾಲೆ, ಪಾಟರಿ ಟೌನ್, ಬೆಂಗಳೂರು-560046.
12. ಶಿಕ್ಷಣ ಇಲಾಖೆಯ ಮಾಹಿತಿ ಕೇಂದ್ರದಲ್ಲಿ ಪ್ರಕಟಿಸುವ ಸಲುವಾಗಿ
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಎಡಿಎಂ2(2) ಆ. ಮಾ: /145/ 2016-17 ದಿನಾಂಕ: 05-12-2018.

ಸರ್ಕಾರದ ಆದೇಶ ಸಂಖ್ಯೆ: ಇಡಿ 131 ಪಿಬಿಎಸ್ 2017 ದಿನಾಂಕ: 20-11-2018ರಲ್ಲಿ ಆದೇಶಿಸಿರುವಂತೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ರವಾನಿಸುತ್ತಾ, ಸದರಿ ಪತ್ರವನ್ನು ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
2. ಕಛೇರಿ ಪತ್ರ